# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 64 | Pages. 2 | Date: 06-02-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 64 – ಪುಟಗಳು : 2 | 06-02-2026 | ಶುಕ್ರವಾರ | Ph: 8762954248 | ದರ : ₹1


# ಸ್ವಾವಲಂಬಿ ಬದುಕು ಯುವಕರ ಆದ್ಯತೆಯಾಗಲಿ

## ಕೃಷಿಕ್ ಫೌಂಡೇಶನ್‌ನ ನೂತನ ಭವನ ಉದ್ಘಾಟನೆ | ಚುಂಚಶ್ರೀ ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ಕಾರಿ ಉದ್ಯೋಗವನ್ನಷ್ಟೇ ಗುರಿಯಾಗಿಸಿಕೊಳ್ಳದೆ ಯುವಕರು ಸ್ವಾವಲಂಬಿ ಬದುಕಿಗೆ ನೆರವಾಗುವ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಎಂ.ಜಿ. ರಸ್ತೆಯಲ್ಲಿ ನಿರ್ಮಿಸಿರುವ ಕೃಷಿಕ್ ಸರ್ವೋದಯ ಫೌಂಡೇಶನ್ ಹಾಸನ ಶಾಖೆಯ ನೂತನ ವೈ.ಕೆ.ಪಿ. ಭವನ ಉದ್ಘಾಟಿಸಿ ಮಾತನಾಡಿದ ಅವರು, ಸ್ಟಾರ್ಟ್‌ಅಪ್‌ಗಳತ್ತ ಯುವಕರು ಗಮನ ಹರಿಸಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ಸ್ವಬದುಕು ಕಟ್ಟಿಕೊಳ್ಳಲು ಬಯಸುವವರಿಗೆ ಆದಿಚುಂಚನಗಿರಿ ಮಠ ಹಾಗೂ ಕೃಷಿಕ್ ಸರ್ವೋದಯ ಫೌಂಡೇಶನ್ ಬೆನ್ನೆಲುಬಾಗಿ ಇರುತ್ತದೆಂದರು.

ಹತ್ತು ವರ್ಷಗಳ ಹಿಂದೆ ಸ್ಟಾರ್ಟ್‌ಅಪ್ ಬಗ್ಗೆ ಏನೂ ಗೊತ್ತಿರಲಿಲ್ಲ. 2016ರಿಂದ ಈ ವರೆಗೆ ದೇಶದಲ್ಲಿ



ಸುಮಾರು 2 ಲಕ್ಷ ಸ್ಟಾರ್ಟ್‌ಅಪ್‌ಗಳು ಪ್ರಾರಂಭವಾಗಿವೆ. ಜಗತ್ತು ವೇಗವಾಗಿ ಬೆಳೆಯುತ್ತಿದ್ದು ಅದಕ್ಕೆ ತಕ್ಕಂತೆ ಯುವಕರು ಕೌಶಲ್ಯದಿಂದ ತಮ್ಮ ಸಾಮರ್ಥ್ಯ ಸಾಬೀತುಪಡಿಸಬೇಕೆಂದು ಸಲಹೆ ನೀಡಿದರು. ನಾನು ಹಾಗು ನನ್ನ ಕುಟುಂಬ ಚೆನ್ನಾಗಿದ್ದರೆ ಸಾಕು ಎಂದು ಯೋಚಿಸಿದರೆ ಸಮಾಜ ಪ್ರಗತಿ ಹೊಂದಲು ಸಾಧ್ಯವಿಲ್ಲ ಎಂದರು.

ಯಾವುದೇ ಒಂದು ಮಹತ್ತರ ಬದಲಾವಣೆ ತರುತ್ತೇವೆಂದರೆ ಒಬ್ಬರಿಂದ ಸಾಧ್ಯವಿಲ್ಲ. ಸ್ವಾಮಿ ವಿವೇಕಾನಂದರು ಕೆ.ಹೆಚ್.ರಾಮಯ್ಯ ಅವರಿಗೆ ಈ ವಿಚಾರವಾಗಿ ಸ್ಪಷ್ಟ ಮಾರ್ಗದರ್ಶನ ನೀಡದಿದ್ದರೆ ಒಕ್ಕಲಿಗರ ಸಂಘ ಸ್ಥಾಪನೆಯಾಗುತ್ತಿರಲಿಲ್ಲವೆಂದು ಸ್ವಾಮೀಜಿ ಹೇಳಿದರು. ವಿವೇಕಾನಂದರು ಕೊಲಂಬೊದಿಂದ ಅಲ್ಮೋರದ ವರೆಗೆ ಪ್ರವಾಸ ಕೈಗೊಂಡಿದ್ದಾಗ ಚೆನ್ನೈನಲ್ಲಿ ವ್ಯಾಸಂಗ ಮಾಡಿಕೊಂಡಿದ್ದ ಕೆ.ಹೆಚ್. ರಾಮಯ್ಯ ಅವರು ಭೇಟಿಯಾಗುತ್ತಾರೆ. ವಿವೇಕಾನಂದರ ಆದರ್ಶ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅವರು ದೇಶಕ್ಕಾಗಿ ನಾನು ಏನಾದರೂ ಕೊಡುಗೆ ನೀಡಬೇಕು. ಅದಕ್ಕಾಗಿ ಏನು ಮಾಡಬೇಕೆಂದು ಕೇಳಿದಾಗ ವಿವೇಕಾನಂದರು ಉತ್ತರಿಸಿ, ಮೊದಲು ನೀನು ಸ್ವಾವಲಂಬಿಯಾಗು, ಸಮಾಜವನ್ನು ಸದೃಢವಾಗಿಸು, ಒಂಟಿಯಾಗಿ ದೇಶ ಕಟ್ಟಲು ಸಾಧ್ಯವಿಲ್ಲವೆನ್ನುತ್ತಾರೆ. ಆ ಮಾತುಗಳಿಂದ ಪ್ರಭಾವಿತರಾದ ರಾಮಯ್ಯ ಬೆಂಗಳೂರಿಗೆ ವಾಪಾಸ್ಸಾಗಿ ಒಕ್ಕಲಿಗರ ಸಂಘವನ್ನು ಸ್ಥಾಪಿಸಿದರು. ಆದಿಚುಂಚನಗಿರಿ ಮಠಕ್ಕೂ ಅವರು ಸ್ಪಷ್ಟ ರೂಪ ನೀಡಿದರೆಂದರು.

> 93 ವರ್ಷದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ವಾರಕ್ಕೆ ಮೂರು ಸಲ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಾರೆ. ಈ ಇಳಿವಯಸ್ಸಿನಲ್ಲೂ ರಾಜ್ಯದ ನೀರಾವರಿಗಾಗಿ ರಾಜ್ಯಸಭೆಯಲ್ಲಿ ಮಾತನಾಡುತ್ತಾರೆ. ರಾಜ್ಯಕ್ಕೆ ನೀರು ಕೊಡಿ ಎಂದು ಅವರು ಹೋರಾಡುತ್ತಿರುವಾಗ ಯುವಕರು ಏನು ಮಾಡುತ್ತಿದ್ದೇವೆ.
>
> **- ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ**

ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ವೈ.ಕೆ.ಪುಟ್ಟಸ್ವಾಮಿಗೌಡ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾವಂತ ಯುವಕ-ಯುವತಿಯರನ್ನು ಸ್ಪರ್ಧಾತ್ಮಕ ಪರೀಕ್ಷೆಗೆ ಅಣಿಗೊಳಿಸಬೇಕೆಂಬ ಉದ್ದೇಶದಿಂದ ಸಮಾಜದ 10 ಜನರು ಸೇರಿ ಕೃಷಿಕ್ ಸರ್ವೋದಯ ಫೌಂಡೇಶನ್ ಸ್ಥಾಪಿಸಿದೆವು. ಉನ್ನತ ವ್ಯಾಸಂಗ ಮಾಡಿದ್ದರೂ ಗ್ರಾಮೀಣ ಮಕ್ಕಳು ಹಿಂಜರಿಕೆಯಿಂದ ದೊಡ್ಡ ಹುದ್ದೆಗಳಿಗೆ ಆಸೆಪಡುವುದಿಲ್ಲ. ಆ ಭಯ ಹೋಗಲಾಡಿಸುವ ದೃಷ್ಟಿಯಿಂದ ಫೌಂಡೇಶನ್ ಪ್ರಾರಂಭಿಸಲಾಯಿತು. ಈ ವರೆಗೆ 1.50 ಕೋಟಿ ರೂ. ವರೆಗೆ ವಿದ್ಯಾರ್ಥಿ ವೇತನ ನೀಡಲಾಗಿದೆ ಎಂದರು.

ಹಾಸನ ಕೃಷಿಕ್ ಸರ್ವೋದಯ ಫೌಂಡೇಶನ್ ಅಧ್ಯಕ್ಷ ದೇವರಾಜ್, ಶಾಸಕ ಹೆಚ್.ಪಿ.ಸ್ವರೂಪ್, ಮಾಜಿ ಐಎಎಸ್ ಅಧಿಕಾರಿ ಶಂಕರಲಿಂಗೇಗೌಡ ಮಾತನಾಡಿದರು. ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀ ಶೈಲನಾಥ ಸ್ವಾಮೀಜಿ, ಒಕ್ಕಲಿಗರ ಸಂಘದ ಅಧ್ಯಕ್ಷ ಹಾಗೂ ಕೃಷಿಕ್ ಸರ್ವೋದಯ ಫೌಂಡೇಶನ್ ನಿರ್ದೇಶಕ ಜಿ.ಎಲ್. ಮುದ್ದೇಗೌಡ, ಟ್ರಸ್ಟಿ ಸಿ.ಕೆ.ಶಿವಣ್ಣ, ಕಾರ್ಯದರ್ಶಿ ಹೆಚ್.ಪಿ.ಮೋಹನ್, ನಿವೇಶನ ದಾನಿ ಮಂಜೇಗೌಡರ ಪುತ್ರಿ ಹೇಮಲತಾ, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ, ಶೇಖರ್, ವೆಂಕಟೇಶ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘು ಮತ್ತಿತರರಿದ್ದರು.

# ಶಾಸಕ ಶಿವಲಿಂಗೇಗೌಡರ ಮಾತಿಗೆ ಖಂಡನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಸದನದಲ್ಲಿ ಆಡಿರುವ ಪದಗಳು ತಲೆ ತಗ್ಗಿಸುವಂತಹವು ಎಂದು ವಕೀಲ ದೇವರಾಜೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಶಿವಲಿಂಗೇಗೌಡರು ನಾಲಿಗೆ ಹರಿಯಬಿಟ್ಟರೂ, ಸಭಾಧ್ಯಕ್ಷರು ನಗುತ್ತಾ ಸುಮ್ಮನೇ ಕುಳಿತಿದ್ದು ಖಂಡನೀಯ. ಆರ್‌ಎಸ್‌ಎಸ್ ಸಮಾಜಕ್ಕೆ ಸಂಸ್ಕೃತಿ ಕಲಿಸಿದೆ, ಕಲಿಸುತ್ತಿದೆ. ಅ ಅದಕ್ಕಾಗಿ ಎಲ್ಲರೂ ಇಷ್ಟ ಪಡುತ್ತಾರೆ. ಇಂಥ ಸಂಘಟನೆ ಬಗ್ಗೆ ಶಿವಲಿಂಗೇಗೌಡರು ಲಘುವಾಗಿ ಮಾತನಾಡಿದ್ದಾರೆ. ಇದೆಲ್ಲವನ್ನು ಕೇಳಿಯೂ ಸಭಾಧ್ಯಕ್ಷರು ನಗುತ್ತಾ ಕುಳಿತಿದ್ದು, ಸರಿಯಲ್ಲ, ಕೂಡಲೇ ಅವರು ರಾಜೀನಾಮೆ ನೀಡಬೇಕು, ಅವರು ಮುಂದುವರಿಯಲು ಅರ್ಹರಲ್ಲ ಎಂದರು.

ಹಿಂದೆ ಸಿ.ಟಿ.ರವಿ ಏನೋ ಮಾತನಾಡಿದರು ಎಂದು ಬಂಧಿಸಲಾಯಿತು. ಅದೇ ನಿರ್ಧಾರ ಶಿವಲಿಂಗೇಗೌಡರ ವಿಚಾರದಲ್ಲಿ ಏಕಿಲ್ಲ, ಕಾಂಗ್ರೆಸ್ ತತ್ವ-ಸಿದ್ಧಾಂತ ಇದೇನಾ. ಶಿವಲಿಂಗೇಗೌಡರೇನೂ ಸಾಚಾ ಅಲ್ಲ ಎಂದು ವಾಗ್ದಾಳಿ ನಡೆಸಿದ ದೇವರಾಜೇಗೌಡ, ಇಂದಿನಿಂದ ನಿಮ್ಮ ರಾಶಿಗೆ ಎಂಟ್ರಿ ಆಗಿದ್ದೇನೆ ಎಂದು ಎಚ್ಚರಿಸಿದರು. ಹಿಂದೆ ಅರಸೀಕೆರೆಯಲ್ಲಿ ಸರ್ಕಾರಿ ಪಾರ್ಕ್ ಕಬಳಿಸಿ, ಅದರಿಂದ ಬಚಾವಾಗಲು ಏಲ್ಲ ಮಾಡಿದರು ಎಂದು ಗೊತ್ತಿದೆ. ಪಾರ್ಕ್ ಕಬಳಿಸಿದ್ದು ಕಳ್ಳತನ ಅಲ್ವಾ, ಸದನದಲ್ಲಿ ಕಳ್ಳ ಅಂದ್ರೆ ತಪ್ಪಾ ಎಂದು ಕೇಳಿದರು.

ಪಾರ್ಕ್ ಜಾಗ ಬದಲಿಗೆ ಬದಲಿ ನಿವೇಶನ ಕೊಡುವ ಸಂಬಂಧ ಹಿಂದೆ ಕುಮಾರಸ್ವಾಮಿ ಅವರು ಸಿಎಂ ಆಗಿದ್ದಾಗ ಸಂಪುಟದಲ್ಲಿ ತೀರ್ಮಾನ ಮಾಡಿದ್ದರಿಂದ ಶಿವಲಿಂಗೇಗೌಡ ಬಚಾವಾದರು.

ಹಿಂದೆ ಜಿಲ್ಲೆಯಲ್ಲಿ ಬ್ಲ್ಯೂಫಿಲಂ ಹಿಂದೆ ಬ್ಲೂಫಿಲಂ ಸರಿಯಾಗಿ ಹಂಚಿಲ್ಲ ಎಂದಿರುವುದು, ಲೋಕಸಭೆ ಚುನಾವಣೆಯಲ್ಲಿ ಹಣ ಹಂಚುವ ಸಂಬಂಧ ಇದೇ ಶಿವಲಿಂಗೇಗೌಡರು ಮಾತನಾಡಿರುವ ಆಡಿಯೋ, ಹುಡಾದಲ್ಲಿ ಲಂಚ ಪಡೆದಿರುವ ದಾಖಲೆ ನನ್ನ ಬಳಿ ಇದ್ದು, ಸೂಕ್ತ ಸಮಯದಲ್ಲಿ ಬಿಡುಗಡೆ ಮಾಡುವೆ ಎಂದು ಎಚ್ಚರಿಕೆ ನೀಡಿದರು.

# 12 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮನೆಯಲ್ಲಿ ಯಾರೂ ಇಲ್ಲದಾಗ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 12 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಗುಳ್ಳದಪುರ ಗ್ರಾಮದಲ್ಲಿ ನಡೆದಿದೆ.

ಕಾಂತರಾಜು ಎಂಬುವವರ ಮನೆಯಲ್ಲಿ ಫೆ. 3ರ ರಾತ್ರಿ ಕಳ್ಳತನ ನಡೆದಿದೆ. ಅಂದು ಬೆಳಿಗ್ಗೆ ಮನೆಗೆ ಬೀಗ ಹಾಕಿ ಜಮೀನಿಗೆ ತೆರಳಿದ್ದ ಅವರು ಸಂಜೆ 6.30ಕ್ಕೆ ವಾಪಾಸ್ಸಾಗಿ ನಂತರ ಕಾರ್ಯನಿಮಿತ್ತ ಹೊಳೆನರಸೀಪುರಕ್ಕೆ ತೆರಳಿದ್ದರು. ಮಾರನೇ ದಿನ ಮನೆಗೆ ಬಂದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿಟ್ಟಿದ್ದ 42 ಗ್ರಾಂ ತೂಕದ ಚಿನ್ನದ ಲಾಂಗ್ ಸರ, 7 ಗ್ರಾಂ ತೂಕದ ಚಿನ್ನದ ಉಂಗುರ, 5 ಗ್ರಾಂ ತೂಕದ ಚಿನ್ನದ ಉಂಗುರ, 6 ಗ್ರಾಂ ತೂಕದ ಒಂದು ಜೊತೆ ಮುತ್ತಿನ ಓಲೆ, 4 ಗ್ರಾಂ ತೂಕದ ಒಂದು ಜೊತೆ ಮಾಟಿ, 20 ಗ್ರಾಂ ತೂಕದ ಒಂದು ಚಿನ್ನದ ಗುಂಡಿನ ಸರ ಸೇರಿ 99 ಗ್ರಾಂ ತೂಕದ ಚಿನ್ನದ ಸರ ಹಾಗೂ 1.05 ಲಕ್ಷ ರೂ. ನಗದು ದೋಚಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಸ್ತೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಕಾಮಗಾರಿ ಗುಣಮಟ್ಟವನ್ನು ಕಾಪಾಡಿಕೊಂಡು ನಿಗದಿತ ಅವಧಿಯೊಳಗೆ ರಸ್ತೆ ಶೀಘ್ರ ಪೂರ್ಣಗೊಳಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲ್ಲೂಕಿನ ಬಾಳ್ಳುಪೇಟೆಯಲ್ಲಿ ನಡೆಯುತ್ತಿರುವ ನೂತನ ರಸ್ತೆ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ತೀರ ಹದಗೆಟ್ಟು ಸಾರ್ವಜನಿಕರ ಸಂಚಾರಕ್ಕೆ ಅಸಾಧ್ಯವಾಗಿದ್ದ ರಾಜ್ಯ ಹೆದ್ದಾರಿ 112ರ ಬೇಲೂರುಸೋಮವಾರಪೇಟೆ ರಸ್ತೆಯನ್ನು ಬಾಳ್ಳುಪೇಟೆಯಿಂದ ಜಮ್ಮನಹಳ್ಳಿ ತನಕ ಸುಮಾರು 3 ಕಿ.ಮೀ. ಉದ್ದದಲ್ಲಿ 10 ಕೋಟಿ ರೂ. ಅನುದಾನದಲ್ಲಿ ನೂತನವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.



ಈ ಯೋಜನೆಯಡಿ 7 ಮೀಟರ್ ಅಗಲದ ದ್ವಿಪಥ ರಸ್ತೆ ನಿರ್ಮಾಣ, 5 ಮೋರಿಗಳ ನಿರ್ಮಾಣ, ಬಾಳ್ಳುಪೇಟೆ ಪಟ್ಟಣ ವ್ಯಾಪ್ತಿಯಲ್ಲಿ ಮೋರಿ ಹಾಗೂ ಆಯ್ದ ಭಾಗಗಳಲ್ಲಿ ಚರಂಡಿ ನಿರ್ಮಾಣ, ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕಾಮಗಾರಿ ವೀಕ್ಷಣೆ ವೇಳೆ ಗುಣಮಟ್ಟದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಸಿಮೆಂಟ್ ಮಂಜು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಗುಣಮಟ್ಟದ ಕಾಮಗಾರಿ ನಡೆಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಕಾರ್ಯರೂಪಕ್ಕೆ ಬರಲು ಎಲ್ಲರೂ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕೆಂದು ಗುತ್ತಿಗೆದಾರರು ಹಾಗೂ ಅಧಿಕಾರಿಗಳಿಗೆ ತಿಳಿಸಿದರು.

ಇಲಾಖೆಗಳ ನಡುವೆ ಸಮನ್ವಯ ಕೊರತೆ ಕಂಡುಬಂದಿದ್ದು, ಇದು ರಸ್ತೆ ನಿರ್ಮಾಣಕ್ಕೆ ಅಡ್ಡಿಯಾಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟ ಅವರು, ಲೋಕೋಪಯೋಗಿ ಇಲಾಖೆ ಹಾಗೂ ಸೆಸ್ಕ್ ಅಧಿಕಾರಿಗಳು ಪರಸ್ಪರ ಸಮನ್ವಯ ಸಾಧಿಸಿಕೊಂಡು ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಮುರುಗೇಶ್, ಸೆಸ್ಕ್ ಸಹಾಯಕ ಕಾರ್ಯಪಾಲಕ ಅಭಿಯಂತರ ಹರೀಶ್ ಹಾಗೂ ಇತರರಿದ್ದರು.

# ಹಾಸನ ಜಿಲ್ಲಾಧಿಕಾರಿಯನ್ನು ಬಿಡದ ಸೈಬರ್ ಕ್ರಿಮಿನಲ್ಸ್ : ಫೇಸ್ ಬುಕ್ ಹ್ಯಾಕ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ಭಾವಚಿತ್ರವಿರುವ ಫೇಸ್ ಬುಕ್ ಐಡಿಯಿಂದ ಬೇರೆಯವರ ಮೊಬೈಲ್‌ಗಳಿಗೆ ಸಂದೇಶ ರವಾನೆಯಾಗುತ್ತಿದ್ದು ಖಾತೆ ಹ್ಯಾಕ್ ಆಗಿದೆ.

ಫೇಸ್ ಬುಕ್ ಐಡಿಯಿಂದ ಯಾವುದೇ ಸಂದೇಶ ಜಿಲ್ಲಾಧಿಕಾರಿ ಕಳುಹಿಸುತ್ತಿಲ್ಲ. ನಕಲಿ ಖಾತೆ ಮೂಲಕ ಸೈಬರ್ ಅಪರಾಧಿಗಳು ಸಂದೇಶಗಳನ್ನು ರವಾನಿಸುತ್ತಿದ್ದಾರೆ. ಅನಧಿಕೃತ ಖಾತೆಯಿಂದ ಬರುವ ಸಂದೇಶಗಳಿಗೆ ಪ್ರತಿಕ್ರಿಯೆ ನೀಡದಂತೆ ಹಾಗು ದೂರುಗಳು ಇದ್ದರೆ ಕಚೇರಿ ವೇಳೆಯಲ್ಲಿ ಭೇಟಿ ಮಾಡಿ ನೀಡಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

# ಹಾಸನ ಮೆಗಾ ಡೇರಿ ವಿಸ್ತರಣೆಗೆ ಕೇಂದ್ರದ ನೆರವು

## ಹೈನುಗಾರಿಕೆ ಸಚಿವರೊಂದಿಗೆ ಹೆಚ್.ಡಿ.ಕೆ ಚರ್ಚೆ | 150 ಕೋಟಿ ರೂ. ಸಾಲ ನೀಡಲು ಸಮ್ಮತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ಹಾಸನ ಮೆಗಾ ಡೇರಿ ವಿಸ್ತರಣಾ ಯೋಜನೆಗೆ ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ ಮೂಲಕ 150 ಕೋಟಿ ರೂ. ಸಾಲ ಸೌಲಭ್ಯ ಕೊಡಿಸಲು ಕೇಂದ್ರ ಸರ್ಕಾರ ಸಮ್ಮತಿಸಿದೆ.

ಈ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮಾಜಿ ಮಂತ್ರಿ, ಹಾಸನ ಹಾಲು ಒಕ್ಕೂಟದ ಅಧ್ಯಕ್ಷ ಹೆಚ್.ಡಿ. ರೇವಣ್ಣ ಅವರೊಂದಿಗೆ ಕೇಂದ್ರದ ಮೀನುಗಾರಿಕೆ, ಹೈನುಗಾರಿಕೆ ಮತ್ತು ಪಶುಸಂಗೋಪನಾ ಖಾತೆ ಸಚಿವ ರಾಜೀವ್ ರಂಜನ್ ಸಿಂಗ್ (ಲಲನ್ ಸಿಂಗ್) ಅವರನ್ನು ಭೇಟಿಯಾಗಿ ವಿನಂತಿ ಮಾಡಿದರು.

ಹಾಸನ ಹಾಲು ಒಕ್ಕೂಟವು ಲಾಭದ ದಾರಿಯಲ್ಲಿ ನಡೆಯುತ್ತಿರುವ ಅತ್ಯುತ್ತಮ ಸಹಕಾರ ಒಕ್ಕೂಟವಾಗಿದೆ. ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳ ಹಾಲು ಉತ್ಪಾದಕರಿಗೆ ಅತಿದೊಡ್ಡ ಆಸರೆಯಾಗಿದೆ. 1977ರಲ್ಲಿ ಆರಂಭವಾದ ಈ ಒಕ್ಕೂಟವು ಪ್ರತೀ ದಿನ 14.5ರಿಂದ 15 ಲಕ್ಷ ಲೀಟರ್ ನಷ್ಟು ಹಾಲು ಸಂಗ್ರಹ ಮಾಡುತ್ತದೆ. ಸುಮಾರು ಒಂದು ಲಕ್ಷಕ್ಕೂ ಅಧಿಕ ಹಾಲು ಉತ್ಪಾದಕರಿಗೆ ಜೀವನೋಪಾಯ ಒದಗಿಸಿದೆ ಎಂದು ಸಚಿವ ಕುಮಾರಸ್ವಾಮಿ ಅವರು ಸಚಿವ ಲಲನ್ ಸಿಂಗ್ ಅವರಿಗೆ ವಿವರಿಸಿದರು.

ನಿತ್ಯವೂ ಸಂಗ್ರಹ ಆಗುತ್ತಿರುವ ಹಾಲನ್ನು ಸಂಸ್ಕರಿಸಿ ಪ್ಯಾಕೆಟ್ ಗಳಲ್ಲಿ ತುಂಬಿ ಮಾರಾಟ ಮಾಡುತ್ತಿದೆ ಹಾಗೂ ಅನೇಕ ಉಪ ಉತ್ಪನ್ನಗಳ ತಯಾರಿಸಿ ಲಾಭದ ಹಾದಿಯಲ್ಲಿ ಮುಂದೆ ಸಾಗುತ್ತಿದೆ.

ಈಗ ಹಾಲು ಸಂಗ್ರಹಣೆಯ ಪ್ರಮಾಣ ಹೆಚ್ಚಾಗುತ್ತದೆ ಹಾಗೂ ಗ್ರಾಮೀಣ ಭಾಗದಲ್ಲಿ ಜೀವನೋಪಾಯ ವೃದ್ಧಿ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಹಾಸನ ಮೆಗಾಡೇರಿಯನ್ನು ಮತ್ತಷ್ಟು ವಿಸ್ತರಿಸಿ ಸಶಕ್ತಿಗೊಳಿಸಬೇಕಿದೆ. ಹೀಗಾಗಿ ಕೇಂದ್ರ ಸರಕಾರದ ನೆರವು ಅಗತ್ಯವಾಗಿದೆ ಎಂದು ಸಚಿವ ಕುಮಾರಸ್ವಾಮಿ ಅವರು ಮನವಿ ಮಾಡಿದರು.



## ರೈಲು ನಿಲ್ದಾಣಗಳ ಅಭಿವೃದ್ಧಿಗೆ ಮನವಿ

ತಮ್ಮ ತವರು ಜಿಲ್ಲೆಯ ಮೊಸಳೆ ಹೊಸಹಳ್ಳಿ, ಮಾವಿನಕೆರೆ ರೈಲು ನಿಲ್ದಾಣಗಳ ಅಭಿವೃದ್ಧಿ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಚರ್ಚೆ ನಡೆಸಿದರು.

ಸಂಸತ್ ಭವನದಲ್ಲಿರುವ ತಮ್ಮ ಕಚೇರಿಗೆ ಬಂದ ರೈಲ್ವೆ ಸಚಿವ ಅಶ್ವಿನ್ ವೈಷ್ಣವ ಅವರಿಗೆ ಪ್ರಸ್ತಾವನೆಗಳನ್ನು ಸಲ್ಲಿಸಿ ಚರ್ಚಿಸಿದರು ಕೇಂದ್ರ ಸಚಿವರು. ತಾವು ಹುಟ್ಟಿ ಬೆಳೆದ ಹೊಳೆನರಸೀಪುರ ತಾಲೂಕಿನ ಮೊಸಳೆ ಹೊಸಹಳ್ಳಿ ಹಾಗೂ ಬೆಟ್ಟದ ರಂಗನಾಥ ಸ್ವಾಮಿ ದೇವಾಲಯಕ್ಕೆ ನೇರ ಸಂಪರ್ಕ ಕಲ್ಪಿಸುವ ಮಾವಿನಕೆರೆ ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಿ ಅತ್ಯಾಧುನಿಕವಾಗಿ ಅಭಿವೃದ್ಧಿ ಮಾಡಬೇಕು ಎಂದು ಮಾಜಿ ಪ್ರಧಾನಿಗಳು ವಿನಂತಿ ಮಾಡಿದರು. ಇದಕ್ಕೆ ಸ್ಪಂದಿಸಿದ ರೈಲ್ವೆ ಸಚಿವರು; ಪ್ರಸಕ್ತ ಸಂಸತ್ ಅಧಿವೇಶನ ಮುಗಿಯುವುದಕ್ಕೆ ಮೊದಲೇ ಈ ಬಗ್ಗೆ ವಿಸ್ತೃತ ವರದಿ ಪಡೆದುಕೊಳ್ಳಲಾಗುವುದು. ಮೊಸಳೆ ಹೊಸಹಳ್ಳಿ ರೈಲು ನಿಲ್ದಾಣವನ್ನು ಅತ್ಯಾಧುನಿಕವಾಗಿ ಅಭಿವೃದ್ಧಿಪಡಿಸಲಾಗುವುದು. ಧಾರ್ಮಿಕ ಕೇಂದ್ರ ಬೆಟ್ಟದ ರಂಗನಾಥ ಸ್ವಾಮಿ ದೇವಾಲಯಕ್ಕೆ ನೇರ ಸಂಪರ್ಕ ಕಲ್ಪಿಸುವ ಮಾವಿನಕೆರೆ ರೈಲು ನಿಲ್ದಾಣವನ್ನು ಪಾರಂಪರಿಕ ರೈಲು ನಿಲ್ದಾಣವನ್ನಾಗಿ ಅಭಿವೃದ್ಧಿ ಮಾಡಲು ಕ್ರಮ ವಹಿಸಲಾಗುವುದು ಎಂದು ರೈಲ್ವೆ ಸಚಿವರು ಭರವಸೆ ನೀಡಿದರು.

# ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್ ಸದೃಢ: ಸಂಪಂಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗಳು ಸೋಲು ಕಂಡಿದ್ದರೂ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿರುವುದು ಜಿಲ್ಲೆಯಲ್ಲಿ ಕಾಂಗ್ರೆಸ್ ಗಟ್ಟಿಯಾಗಿರುವುದಕ್ಕೆ ಸಾಕ್ಷಿ ಎಂದು ಮಾಜಿ ಶಾಸಕ, ಪ್ರದೇಶ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷ ಎನ್. ಸಂಪಂಗಿ ಹೇಳಿದರು.

ತಾಲೂಕಿನ ಬಾಳುಪೇಟೆಯಲ್ಲಿ ನಡೆದ ಬೆಳಗೋಡು ಹೋಬಳಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಪಕ್ಷವನ್ನು ಕಟ್ಟಿದ ಹಿರಿಯ ನಾಯಕರು ಹಾಗೂ ವಿದ್ಯಾರ್ಥಿ ರಾಜಕೀಯದಿಂದ ಬಂದ ಕಾರ್ಯಕರ್ತರ ಶ್ರಮವೇ ಇಂದಿನ ಬಲಕ್ಕೆ ಕಾರಣವಾಗಿದೆ ಎಂದರು. ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತರು ಹಾಗೂ ಎಲ್ಲಾ ವರ್ಗದ ಬಡವರ ನಂಬಿಕೆಯ ಪಕ್ಷವೇ ಕಾಂಗ್ರೆಸ್. ಕಾಂಗ್ರೆಸ್ ಇಲ್ಲದಿದ್ದರೆ ನಾವು ಯಾರೂ ಇಲ್ಲ ಎಂಬುದನ್ನು ಮನಗಾಣಬೇಕು ಎಂದ ಅವರು, ಡಿ.ಕೆ.ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಪಕ್ಷ ಮತ್ತಷ್ಟು ಬಲಗೊಂಡಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಜನಪರವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಐದು ಗ್ಯಾರಂಟಿ ಯೋಜನೆಗಳಿಂದ ಬಡವರಿಗೆ ಮಹತ್ವದ ನೆರವು ದೊರಕುತ್ತಿದೆ. ಹಿಂದೆ ಈ ಯೋಜನೆಗಳನ್ನು ವಿರೋಧಿಸಿದ್ದ ಬಿಜೆಪಿಯೇ ಈಗ ಬೇರೆ ರಾಜ್ಯಗಳಲ್ಲಿ ಅದೇ ಮಾದರಿಯನ್ನು ಅನುಸರಿಸುತ್ತಿರುವುದು ಕಾಂಗ್ರೆಸ್ ಸರ್ಕಾರದ ಸಾಧನೆಗೆ ಸಾಕ್ಷಿಯಾಗಿದೆ ಎಂದರು.

ಮುಂಬರುವ ಗ್ರಾಮ, ತಾಲೂಕು ಹಾಗು ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಒಗ್ಗಟ್ಟಾಗಿ ಕಾರ್ಯನಿರ್ವಹಿಸಬೇಕು. ಪಕ್ಷಕ್ಕೆ ಹಾನಿ ಉಂಟುಮಾಡುವ ಯಾವುದೇ ವ್ಯಕ್ತಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ. ಕಾಂಗ್ರೆಸ್ ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ. ಪಕ್ಷ ಇದ್ದರೆ ಮಾತ್ರ ಕಾರ್ಯಕರ್ತರಿಗೆ ಸ್ಥಾನಮಾನ ಹಾಗೂ ಅವಕಾಶಗಳು ದೊರೆಯುತ್ತವೆ ಎಂದು ಸಂಪಂಗಿ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್ ಮಾತನಾಡಿ, ಪಕ್ಷ ಸಂಘಟನೆಗೆ ಶಿಸ್ತು, ಏಕತೆ ಹಾಗೂ ಸಮನ್ವಯ ಅತ್ಯಂತ ಅವಶ್ಯಕ. ಭಿನ್ನಾಭಿಪ್ರಾಯಗಳಿದ್ದರೆ ಅವುಗಳನ್ನು ಸಾರ್ವಜನಿಕವಾಗಿ ಚರ್ಚಿಸುವ ಬದಲು ನಾಯಕರ ಎದುರು ಪರಿಹರಿಸಿಕೊಳ್ಳಬೇಕು. ಮುಂದಿನ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲರೂ ಪಕ್ಷದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಹೇಳಿದರು.

ಮುರಳಿ ಮೋಹನ್ ಅವರು ಪ್ರಾಮಾಣಿಕ ಕಾರ್ಯಕರ್ತರಾಗಿದ್ದು, ಅವರ ಕೆಲಸ ಶೈಲಿ ಎಲ್ಲರಿಗೂ ಗೊತ್ತಿದೆ. ಮುಂದಿನ ಚುನಾವಣೆಯಲ್ಲಿ ಗೆಲುವಿಗೆ ಅಗತ್ಯ ತಂತ್ರ ರೂಪಿಸಿಕೊಂಡು, ಶಿಸ್ತಿನಿಂದ ಕೆಲಸ ಮಾಡಿದರೆ ಕಾಂಗ್ರೆಸ್‌ಗೆ ಖಂಡಿತ ಜಯ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರದೇಶ ಕಾಂಗ್ರೆಸ್ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಬಿ. ಶ್ರೀನಿವಾಸ್, ಸಕಲೇಶಪುರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫಿಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭೈರಮುಡಿ ಚಂದ್ರು ಹಲವರು ಉಪಸ್ಥಿತರಿದ್ದರು.

## ಸೋತರೂ ಕ್ಷೇತ್ರದಲ್ಲೇ ಇದ್ದೇನೆ

ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಮುರಳಿ ಮೋಹನ್ ಮಾತನಾಡಿ, 2008ರಿಂದ ಮೀಸಲಾತಿ ಕ್ಷೇತ್ರವಾಗಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವು ಅನೇಕ ನಾಯಕರಿಗೆ ಅವಕಾಶ ನೀಡಿದೆ. ತಾವು 2018ರಿಂದಲೇ ಕ್ಷೇತ್ರದಲ್ಲಿ ಬೇರುಮಟ್ಟದಿಂದ ಪಕ್ಷಕ್ಕಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದು, ಈ ಶ್ರಮವನ್ನು ಗುರುತಿಸಿ 2023ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಲಾಯಿತು ಎಂದರು. ಸೋಲಿನ ಬಳಿಕವೂ ನಿರಾಶರಾಗದೆ ಮತದಾರರ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, 2028ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಗುರಿಯೊಂದಿಗೆ ಶಕ್ತಿ ಮೀರಿ ಶ್ರಮಿಸುತ್ತಿರುವುದಾಗಿ ಹೇಳಿದರು.

2028ರಲ್ಲಿ ಟಿಕೆಟ್ ಸಿಕ್ಕರೂ ಸಿಕ್ಕದೇ ಇದ್ದರೂ ಪಕ್ಷವನ್ನು ಉಳಿಸಿ ಬಲಪಡಿಸುವ ಕೆಲಸ ಮುಂದುವರಿಸುತ್ತೇನೆ. ಆದರೆ, ಕೆಲವರು ಕಾರ್ಯಕರ್ತರು ಹಾಗೂ ಮುಖಂಡರ ಆತ್ಮಸ್ಥೈರ್ಯವನ್ನು ಕುಗ್ಗಿಸುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದು ಪಕ್ಷದ ಬೆಳವಣಿಗೆ ಮೇಲೆ ಪರಿಣಾಮ ಬೀರುತ್ತಿದೆ ಎಂದರು.

# ಏಷ್ಯಾಟಿಕ್ ಸಿಂಹಗಳ ಗಿರ್ ಅರಣ್ಯದಲ್ಲಿ ಬಸ್ ಸಫಾರಿ

**– ಗೊರೂರು ಅನಂತರಾಜು**

ನಮ್ಮ ಐದು ದಿನಗಳ ಗುಜರಾತ್ ಪ್ರವಾಸದಲ್ಲಿ ದ್ವಾರಕಾ, ನಾಗೇಶ್ವರ, ಸೋಮನಾಥ, ನಿಷ್ಕಲಂಕ ಹೀಗೆ ಪುರಾಣ ಪ್ರಸಿದ್ಧ ದೇವಾಲಯಗಳ ದರ್ಶನ ಜೊತೆಗೆ ಗಿರ್ ಅರಣ್ಯ ಸಿಂಹ ಸಫಾರಿಯು ಪ್ರವಾಸಿ ಪಟ್ಟಿಯಲ್ಲಿ ಒಳಗೊಂಡಿತ್ತು. ಹಿಂದಿನ ದಿನ ರಾತ್ರಿ ಸೋಮನಾಥ ದೇವಾಲಯ ದರ್ಶನ ಮುಗಿಸಿ ಮಾರನೇ ದಿನ ಬೆಳಿಗ್ಗೆ ಹೋಟೆಲ್‌ನಲ್ಲಿ ತಿಂಡಿ ತಿಂದು ನಂತರ ನಮ್ಮ ಬಸ್ಸು ಗಿರ್ ಅರಣ್ಯದತ್ತ ಹೊರಟಿತು. ನಾವು ಬೆಂಗಳೂರಿನಿಂದ ಇಂಡಿಗೋ ವಿಮಾನದಲ್ಲಿ ಅಹಮದಾಬಾದ್‌ಗೆ ಪ್ರಯಾಣಿಸಿ ಅಲ್ಲಿಂದ ಗುಜರಾತ್‌ನ ಪ್ರಮುಖ ಯಾತ್ರಾ ಸ್ಥಳಗಳು, ಪ್ರವಾಸಿ ತಾಣಗಳಿಗೆ ಸುತ್ತಾಡಲು ನಮ್ಮನ್ನು ಕರೆದುಕೊಂಡು ಹೋಗಿದ್ದ ನೇತಾಜಿ ಟೂರ್ ಟ್ರಾವೆಲ್ ಏಜೆನ್ಸಿಯವರು ಅಹಮದಾಬಾದ್‌ನಲ್ಲೇ ಒಂದು ಖಾಸಗಿ ಬಸ್‌ನ್ನು ಮೊದಲೇ ಬುಕ್ ಮಾಡಿದ್ದರು. ಗಿರ್ ಅರಣ್ಯ ರಾಷ್ಟ್ರೀಯ ಉದ್ಯಾನವನವು ಏಷ್ಯಾಟಿಕ್ ಸಿಂಹಗಳ ವಿಶ್ವದ ಏಕೈಕ ನೈಸರ್ಗಿಕ ಆವಾಸಸ್ಥಾನವಾಗಿದೆ. ಇದನ್ನು ಸಸನ್ ಗಿರ್ ಎಂದೂ ಕರೆಯುತ್ತಾರೆ. ಇದು ಗುಜರಾತ್‌ನ ತಲಾಲಾ ಗಿರ್ ಬಳಿಯ ಅರಣ್ಯ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಅಭಯಾರಣ್ಯವಾಗಿದೆ. ಗುಜರಾತ್‌ನ ಅರಣ್ಯ ಪ್ರದೇಶದೊಳಗೆ ನೆಲೆಗೊಂಡಿರುವ ದೇವಾರಿಯಾ ಸಫಾರಿ ಪಾರ್ಕ್ ಗಿರ್ ಇಂಟಿಪ್ರಿಟೇಷನ್ ಝೋನ್ ಎಂದು ಕರೆಯಲ್ಪಡುತ್ತದೆ. ಏಪ್ಯಾಟಿಕ್ ಸಿಂಗಳು ಇವು ಬೇಲಿಯಿಂದ ಸುತ್ತುವರಿದ ಪ್ರದೇಶದಲ್ಲಿ ಮುಕ್ತವಾಗಿ ಸಂಚರಿಸುತ್ತವೆ. ಸಿಂಹಗಳು ಮುಕ್ತವಾಗಿ ಓಡಾಡುವ ವಿಶ್ವದ ಏಕೈಕ ಸ್ಥಳ ಇದು ಎಂದು ಹೆಸರಾಗಿದೆ. ಗುಜರಾತ್‌ನ ಜುನಾಗಡ್ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಗಿರ್ ಗಿರಿಶ್ರೇಣಿಯ ತಳಭಾಗದಲ್ಲಿರುವ ಇದನ್ನು ಅರಣ್ಯವೆಂದು ಹೇಳಿದರೂ ಅಂತಹ ದಟ್ಟವಾದ ಕಾಡು ಪ್ರದೇಶ ಅಲ್ಲ. ಅರೆ ಮರುಭೂಮಿಯಿಂದ ಕೂಡಿದ ಈ ಅರಣ್ಯವು 1,412 ಚದರ ಕಿ.ಮೀ. ವಿಸ್ತೀರ್ಣ ಪ್ರದೇಶದಲ್ಲಿ ಹರಡಿದೆ. 258 ಚದರ ಕಿ.ಮೀ. ರಾಷ್ಟ್ರೀಯ ಉದ್ಯಾನ ಮತ್ತು 1153 ವನ್ಯಜೀವಿ ಅಭಯಾರಣ್ಯ, ಪೆರಾವಲ್‌ನಿಂದ 45 ಕಿ.ಮೀ. ಮತ್ತು ಜುನಾಗಢ್‌ನಿಂದ 60 ಕಿ.ಮೀ. ದೂರವಿದೆ. ಇದನ್ನು 1965ರಲ್ಲಿ ಸ್ಥಾಪಿಸಲಾಗಿದೆ. ಈ ಗಿರ್ ಅರಣ್ಯ ಸಾಮ್ರಾಜ್ಯದಲ್ಲಿ ಪ್ರಾಣಿಗಳ ಕಿಂಗ್ ಸಿಂಹರಾಜಗಳದೇ ದರ್ಬಾರ್. ನಮ್ಮ ನಿರೀಕ್ಷೆಯೂ



ವೀಕ್ಷಣೆಯೂ ಸಿಂಹಗಳೇ ಆಗಿದ್ದವು. ಎಲ್ಲೋ ಒಂದು ಕಡೆ ಆಳವಾದ ಕಂದಕದಲ್ಲಿ ಜಿಂಕೆಗಳು ಗೋಚರಿಸಿದವು. ಇವುಗಳನ್ನು ಸಿಂಹಗಳು ಬೇಟೆಯಾಡುವುದಿಲ್ಲವೇ. ಹೇಗೆ ಇವೆಲ್ಲಾ ಸುರಕ್ಷಿತ ಎಂಬ ಸಂದೇಹ ಕಾಡಿದರೂ ಜಿಂಕೆಗಳ ಸುರಕ್ಷಿತ ವಲಯದಲ್ಲಿ ಸಿಂಹ, ಚಿರತೆಗಳು ದಾಳಿ ಮಾಡದಂತೆ ತಡೆ ಬೇಲಿ ನಿರ್ಮಿಸಿದೆ. ಈ ಪ್ರದೇಶವು ಒಣ ಪತನಶೀಲ ಕಾಡುಗಳಿಂದ ಕೂಡಿದ್ದು ಸಿಂಹಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಭಾರತದಲ್ಲಿ ಉಳಿದಿರುವ ಕೆಲವೇ ಸಿಂಹಗಳು ಗಿರ್ ಅರಣ್ಯದಲ್ಲಿ ಹೆಚ್ಚಾಗಿ ಇರುವುದರಿಂದ ಇದೊಂದು ಅಭಯಾರಣ್ಯ. ಈ ಅರಣ್ಯದಲ್ಲಿನ ಸಿಂಹಗಳ ರಕ್ಷಣೆಗೆ ಸರ್ಕಾರ ವಿಶೇಷ ಕ್ರಮ ಕೈಗೊಂಡಿದೆ. 1968ರ ಗಣತಿಯಂತೆ 177 ಇದ್ದ ಇವುಗಳ ಸಂಖ್ಯೆ 2020ರ ಗಣತಿಯಂತೆ 674 ಇವೆ. ಸೌರಾಷ್ಟ್ರದ ದಕ್ಷಿಣ ತೀರಕ್ಕೆ 75 ಕಿ.ಮೀ. ದೂರದಲ್ಲಿರುವ ಗಿರ್ ಗಿರಿಸಾಲು ಪೂರ್ವ ಪಶ್ಚಿಮವಾಗಿ 180 ಕಿ.ಮೀ. ದೂರ ಹಬ್ಬಿದೆ. ಅಲ್ಲಲ್ಲಿ ಕತ್ತರಿಸಿದಂತಿರುವ ಗಿರ್ ಶ್ರೇಣಿಯ ಪಶ್ಚಿಮದಲ್ಲಿ ಓಜಾತ್ ನದಿಯೂ ಪೂರ್ವದಲ್ಲಿ ಶೆತ್ರುಂಜಿ ನದಿಯೂ ಹರಿಯುತ್ತದೆ. ಓಜಾತ್ ನದಿ ಗಿರ್ ಶ್ರೇಣಿಗೂ ಗಿರ್ನಾರ್ ಶ್ರೇಣಿಗೂ ಗಿರ್ನಾರ್ ನಡುವಣ ಗಡಿರೇಖೆಯಂತಿದೆ. ಗುಡಾಜಲೀ ಮತ್ತು ಕಾಲವೊ ನದಿಗಳ ಉಗಮಸ್ಥಾನ ಗಿರ್ನಾರ್. ಗಿರ್ ಜಂಗಲ್ ಟ್ರಯಲ್ ಅರಣ್ಯ ಇಲಾಖೆಯು ಆಯೋಜಿಸುವ 3 ಗಂಟೆಗಳ ಜೀಪ್ ಸಫಾರಿ ಅತ್ಯಂತ ಜನಪ್ರಿಯವಾಗಿದೆ. ಅರಣ್ಯ ಉದ್ಯಾನಕ್ಕೆ ಭೇಟಿ ನೀಡಲು ಅರಣ್ಯ ಇಲಾಖೆಯಿಂದ ಮುಂಗಡ ಆನ್‌ಲೈನ್ ಟಿಕೇಟ್ ಪಡೆಯಬೇಕು. ಸಫಾರಿ ಸಮಯ ಬೆಳಿಗ್ಗೆ 6 ರಿಂದ 9, 9 ರಿಂದ 12, ಮತ್ತು 4 ರಿಂದ 7 ಗಂಟೆಯವರೆಗೆ ಇರುತ್ತದೆ.

ನಾವು ಹೋಗಿದ್ದ 23 ಪ್ರವಾಸಿಗರು ಬಸ್ ಸಫಾರಿ ಮಾಡಿದೆವು. ನಮ್ಮ ಸಫಾರಿ 45 ರಿಂದ 1 ಗಂಟೆಯ ಅವಧಿಯದು. ನಮ್ಮ ಬಸ್ ಸಫಾರಿಯಲ್ಲಿ ಅನೇಕ ಸಿಂಹಗಳು ಗೋಚರಿಸಿದವು. ಕೆಲವು ಬಿಸಿಲಿಗೆ ಮಲಗಿ ವಿಶ್ರಾಂತಿ ಪಡೆಯುತ್ತಿದ್ದವು. ಕೆಲವು ಪೊದೆಗಳ ನಡುವೆ ಓಡಾಡುತ್ತಿದ್ದವು. ಅಲ್ಲಿ ನೋಡಿ ಮರದ ಮೇಲೊಂದು ಸಿಂಹ ಕುಳಿತಿದೆ ಎಂದು ತೋರಿಸಿದ ಮಡದಿ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿಯುವ ಪ್ರಯತ್ನ ನಡೆಸಿದಳು. ಹೀಗೆ ಬಸ್ಸಿನಲ್ಲಿದ್ದವರು ಅಲ್ಲಿ ನೋಡಿ ಇಲ್ಲಿ ನೋಡಿ ಎಂದು ಖುಷಿಯಲ್ಲಿ ಕೂಗುತ್ತಿದ್ದರು. ನಾವು ಕೊಟ್ಟ ಕಾಸಿಗೆ ಲಾಸ್



ಏನೂ ಆಗಲಿಲ್ಲ. ಒಂದಿಷ್ಟು ಸಿಂಹಗಳನ್ನು ನೋಡಿದೆವು. ಅವು ನಾವು ಸಾಗುತ್ತಿದ್ದ ದಾರಿಯಿಂದ ಸಾಕಷ್ಟು ದೂರದಲ್ಲಿ ಕಾಣಿಸಿಕೊಂಡವು. ಇನ್ನೂ ಇಲ್ಲಿಯ ಉದ್ಯಾನವನ ಮಕ್ಕಳಿಗೆ ದೊಡ್ಡ ಆಕರ್ಷಣೆ. ಹಚ್ಚ ಹಸಿರಿನ ತೆರೆದ ಹುಲ್ಲುಗಾವಲುಗಳು ಕುಳಿತು ವಿಶ್ರಮಿಸಲು ಕಲ್ಲುಹಾಸುಗಳು ಇವೆ. ಕೃತಕವಾಗಿ ನಿರ್ಮಿಸಿದ ಹಸಿರು ಪ್ರಾಣಿಗಳ ಮುಂದೆ ಕೆಲವರು ಪೋಟೋ ತೆಗೆಸಿಕೊಳ್ಳುತ್ತಿದ್ದರು. ನಾವು ಕುಟುಂಬದವರು ತೆಗೆಸಿಕೊಂಡವು. ಕಾಮನಬಿಲ್ಲಿನಂತೆ ಮರದ ಶೈಲಿಯ ನಿರ್ಮಿತ ಪ್ರವೇಶ ದ್ವಾರ ಆಕರ್ಷಣೀಯವಾಗಿ ಅದರ ಮೇಲೆ ಮನುಷ್ಯ ನಿರ್ಮಿತ ಎರಡು ಸಿಂಹಗಳು, ನೀರು ಕುಡಿಯುತ್ತಿರುವ ಸಿಂಹಗಳು ಇಲ್ಲಿ ನಿಂತು ಪೋಟೋ ಕ್ಲಿಕ್ಕಿಸಿಕೊಂಡೆವು. ಅಷ್ಟರಲ್ಲಿ ಬೇರೆ ಬೇರೆ ಬಸ್ಸು ಗಳಲ್ಲಿ ಹೋಗಿದ್ದ ನಮ್ಮ ತಂಡದ ಇತರೆ ಪ್ರವಾಸಿಗರು ಬಂದರು. ನಾವು ಪ್ರವೇಶದ್ವಾರದ ಹೊರಗೆ ನಿಲ್ಲಿಸಿದ್ದ ನಮ್ಮ ಬಸ್‌ನ್ನು ಹತ್ತಿ ಕುಳಿತು ಮುಂದೆ ಪ್ರಯಾಣಿಸುವಾಗ ಆಯಾಸಕ್ಕೆ ನಿದ್ರೆ ಬಂತಾಗಿ ಕನಸಿನಲ್ಲಿ ಅದೇ ಸಿಂಹಗಳು ಘರ್ಜಿಸಿದಂತಾಗಿ ಎಚ್ಚರವಾಗಲು ಯಾರೋ ಮಹನೀಯರು ಗೊರಕೆ ಹೊಡೆಯುತ್ತಿದ್ದರು.

# ಜಿಲ್ಲಾ ಪ್ರಾಧಿಕಾರ ಸದಸ್ಯರಾಗಿ ಜೆಡಿಎಸ್‌ನ ಶೈಲೇಶ್ ಗೆಲುವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಹಾಸನ ಜಿಲ್ಲಾ ಪ್ರಾಧಿಕಾರ ಚುನಾವಣೆಯಲ್ಲಿ ಪುರಸಭೆ ಸದಸ್ಯರಾದ ಶೈಲೇಶ್ ಹಾಗೂ ಮೀನಾಕ್ಷಿ ವೆಂಕಟೇಶ್ ಜಯ ಸಾಧಿಸಿದ್ದಾರೆ.

ಎರಡು ಸ್ಥಾನಗಳಿಗೆ ಮೂವರು ಕಣದಲ್ಲಿದ್ದರು. ಪುರಸಭೆ ಸದಸ್ಯರಾದ ಕಾಂಗ್ರೆಸ್‌ನ ಮೀನಾಕ್ಷಿ ವೆಂಕಟೇಶ್ ಹಾಗೂ ಜೆಡಿಎಸ್‌ನ ಶೈಲೇಶ್ ವಿಜಯಿಯಾಗಿದ್ದು, ಕಾಂಗ್ರೆಸ್‌ನ ಜಮಾಲುದ್ದೀನ್ ಸೋಲು ಕಂಡಿದ್ದಾರೆ.

17 ಕಾಂಗ್ರೆಸ್ ಸದಸ್ಯರು ಇದ್ದರೂ ಸಹ ಪಕ್ಷದ ಅಭ್ಯರ್ಥಿಗೆ ಜಯ ದೊರೆಯದಿರುವುದು ಕಾಂಗ್ರೆಸ್ ಪಕ್ಷಕ್ಕೆ ತೀವ್ರ ಮುಖಭಂಗ ತಂದಿದೆ.

ಪುರಸಭೆ ಮಾಜಿ ಅಧ್ಯಕ್ಷ ಎ.ಆರ್. ಅಶೋಕ್ ಮಾತನಾಡಿ, ನನ್ನನ್ನು ಕುತಂತ್ರದಿಂದ ಬಿ.ಶಿವರಾಂ ಅವರು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದರು. ಪುರಸಭೆಯಲ್ಲಿ ಸಭೆ ನಡೆಯುವಾಗ ಟೇಬಲ್‌ಚೇರ್ ಒಡೆದು ಗಲಾಟೆ ಸೃಷ್ಟಿಸಲಾಯಿತು. ನಮ್ಮ ಜೊತೆ ನಿಂತವರು ಕೆಲವರು ಮಾತ್ರ, ಇಂದು ಅವರು ಗೆದ್ದಿದ್ದಾರೆ. ಇದು ಸತ್ಯಕ್ಕೆ ದೊರೆತ ಜಯ, ಬಿ. ಶಿವರಾಂ ಅವರಿಗೆ ಈ ಚುನಾವಣೆಯಲ್ಲಿ ತೀವ್ರ ಮುಖಭಂಗವಾಗಿದೆ. ಮುಂದೆಯೂ ಇದೇ ಗತಿ. ನನ್ನ ಸದಸ್ಯತ್ವವನ್ನು ರದ್ದುಪಡಿಸಬೇಕು ಎಂದು ಕೆಲವರು ಹುನ್ನಾರ ನಡೆಸಿದರು. ಆದರೆ ಅದು ಸಂಪೂರ್ಣ ವಿಫಲವಾಗಿದೆ. ನ್ಯಾಯಾಲಯ ಸತ್ಯವನ್ನು ತಿಳಿದು ನನ್ನ ಪರವಾಗಿ ತೀರ್ಪು ನೀಡಿದೆ. ಮುಂದಿನ ದಿನಗಳಲ್ಲಿ ಹೈಕೋರ್ಟ್‌ನಲ್ಲೂ ಜಯ ದೊರೆತರೆ, ಮತ್ತೆ ಪುರಸಭೆ ಅಧ್ಯಕ್ಷನಾಗಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಸದಸ್ಯ ಜಗದೀಶ್ ಮಾತನಾಡಿ, ಜಿಲ್ಲಾ ಪ್ರಾಧಿಕಾರದ ನಿರ್ದೇಶಕರು ವಿಜೇತರಾಗಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಇಬ್ಬರು ಹಾಗೂ ಜೆಡಿಎಸ್‌ನಿಂದ ಒಬ್ಬರು ಸ್ಪರ್ಧಿಸಿದ್ದರು. ಅದರಲ್ಲೂ ಒಂದು ಸ್ಥಾನವನ್ನು ನಾವು ಗೆದ್ದಿದ್ದೇವೆ. ಕಾಂಗ್ರೆಸ್ ಒಂದು ಸ್ಥಾನ ಗೆದ್ದರೂ, ಪುರಸಭೆ ಆಡಳಿತದಲ್ಲಿರುವ ಕಾಂಗ್ರೆಸ್ ಅಭ್ಯರ್ಥಿಯೊಬ್ಬರು ಸೋತಿರುವುದು ಅವರಿಗೆ ದೊಡ್ಡ ಆಘಾತವಾಗಿದೆ ಎಂದು ಹೇಳಿದರು.

ಜೆಡಿಎಸ್‌ನ 5 ಮಂದಿ ಹಾಗೂ ಬಿಜೆಪಿಯ ಒಬ್ಬ ಸದಸ್ಯರಿದ್ದರೂ, ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಅಶೋಕ್ ಅವರು ನಮ್ಮ ಬೆನ್ನೆಲುಬಾಗಿ ನಿಂತು ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಾರೆ. ನಮ್ಮನ್ನು ನಂಬಿ ಇತರೆ ಸದಸ್ಯರು ಮತ ಹಾಕಿದ್ದಾರೆ. ಕೇವಲ 5 ಮಂದಿ ಸದಸ್ಯರಿದ್ದರೂ ನಮ್ಮ ಪಕ್ಷದ ಶೈಲೇಶ್ ಅವರಿಗೆ 11 ಮತಗಳು ಬಂದಿವೆ ಎಂದರೆ, ಕಾಂಗ್ರೆಸ್‌ನ ಸ್ಥಿತಿ ಎಷ್ಟು ಹೀನಾಯವಾಗಿದೆ ಎಂಬುದು ಸ್ಪಷ್ಟ. ಈ ಗೆಲುವಿಗೆ ನಮ್ಮ ಹಿರಿಯ ನಾಯಕರ ಮಾರ್ಗದರ್ಶನವೇ ಪ್ರಮುಖ ಕಾರಣ ಎಂದು ತಿಳಿಸಿದರು.

ಜಿಲ್ಲಾ ಪ್ರಾಧಿಕಾರದ ನೂತನ ನಿರ್ದೇಶಕ ಶೈಲೇಶ್ ಮಾತನಾಡಿ, ಪಕ್ಷದ ಹಿರಿಯ ಮುಖಂಡರು, ಮತ್ತು ಎಲ್ಲರ ಸಹಕಾರವನ್ನು ಪಡೆದು ಹಾಸನ ಜಿಲ್ಲಾ ಪ್ರಾಧಿಕಾರದ ಅಭಿವೃದ್ಧಿಗೆ ಕೈ ಜೋಡಿಸುತ್ತೇನೆ ಎಂದರು.

ಈ ಚುನಾವಣಾ ಫಲಿತಾಂಶವು ಪುರಸಭೆಯ ರಾಜಕೀಯ ವಾತಾವರಣದಲ್ಲಿ ಮಹತ್ವದ ಬದಲಾವಣೆಗೆ ಸೂಚನೆಯಾಗಿದ್ದು, ಮುಂದಿನ ದಿನಗಳಲ್ಲಿ ರಾಜಕೀಯ ಸಮೀಕರಣಗಳು ಬದಲಾಗುವ ಸಾಧ್ಯತೆಗಳಿವೆ ಎಂದು ಚರ್ಚೆಯಾಗುತ್ತಿದೆ.

# ಆರೋಗ್ಯಕ್ಕಿಂತ ದೊಡ್ಡ ಭಾಗ್ಯ ಮತ್ತೊಂದಿಲ್ಲ: ಡಾ. ನಾರಾಯಣಸ್ವಾಮಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಆರೋಗ್ಯಕ್ಕಿಂತ ದೊಡ್ಡ ಭಾಗ್ಯ ಮತ್ತೊಂದಿಲ್ಲ. ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದು ಡಾ. ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

ಬಿಕ್ಕೋಡು ಪಟ್ಟಣದ ಮುಖ್ಯ ರಸ್ತೆಯಲ್ಲಿರುವ ಆಟೋ ನಿಲ್ದಾಣದಲ್ಲಿ ಡಾ.ನಾರಾಯಣಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಆಟೋ ಚಾಲಕರು ಮತ್ತು ಮಾಲಿಕರಿಗೆ, ಹಾಗೂ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಟೋ ಚಾಲಕರು ಗ್ರಾಮೀಣ ಜನತೆ ತಮ್ಮ ಹಾಗೂ ಕುಟುಂಬ ಸದಸ್ಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಆರೋಗ್ಯ ಸಮಸ್ಯೆ ಎದುರಾದರೆ ನಿರ್ಲಕ್ಷ್ಯ ತೋರದೆ ತಕ್ಷಣವೇ ಚಿಕಿತ್ಸೆ ಪಡೆಯಬೇಕು. ಆಟೋ ಚಾಲಕರು ತಮ್ಮ ಒತ್ತಡದ ಕೆಲಸದಿಂದ ಸರಿಯಾದ ನಿದ್ರೆ ಮಾಡಲು ಸಾಧ್ಯವಿಲ್ಲ. ಸರಿಯಾದ ಸಮಯಕ್ಕೆ ಆಹಾರ ಸೇವಿಸಲು



ಸಾಧ್ಯವಾಗುವುದಿಲ್ಲ. ಇದರಿಂದ ಬಿಪಿ, ಶುಗರ್, ಹೃದಯ ಸಂಬಂಧಿ ಖಾಯಿಲೆಗಳು ಸೃಷ್ಟಿಯಾಗುತ್ತವೆ. ಆದ್ದರಿಂದ ಆಟೋ ಚಾಲಕರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ನಿಟ್ಟಿನಲ್ಲಿ ಉತ್ತಮ ಆಹಾರ ಸೇವನೆ ಮತ್ತು, ಆರೋಗ್ಯ ತಪಾಸಣೆ ಮಾಡಿಸುವುದು ಬಹುಮುಖ್ಯ ಎಂದು ತಿಳಿಸಿದರು.

ಸಾರ್ವಜನಿಕರು ಸಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಆರೋಗ್ಯವಂತರಾಗಿರಬೇಕು. ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಭಾಗದ ಜನ ಗಂಭೀರ ಕಾಯಿಲೆಗಳಿಗೆ ತುತ್ತಾಗಿ ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಮೃತಪಡುತ್ತಿದ್ದಾರೆ. ಗ್ರಾಮೀಣ ಜನತೆ ಕೃಷಿ, ಹೈನುಗಾರಿಕೆ ಚಟುವಟಿಕೆ ಒತ್ತಡದ ನಡುವೆ ಆರೋಗ್ಯ ನಿರ್ಲಕ್ಷಿಸುತ್ತಾರೆ. ಆರಂಭದಲ್ಲೇ ಚಿಕಿತ್ಸೆ ನೀಡಲು ಆರೋಗ್ಯ ಶಿಬಿರಗಳು ಪೂರಕ ಎಂದು ಸಲಹೆ ನೀಡಿದರು.

# ತಂಬಾಕು ಹರಾಜು ಮಾರುಕಟ್ಟೆ ಪುನಾರಂಭ: ಆದಾಯ ನಿರೀಕ್ಷೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಕಳೆದ ಎರಡು ವಾರಗಳಿಂದ ಸ್ಥಗಿತಗೊಂಡಿದ್ದ ಹರಾಜು ಪ್ರಕ್ರಿಯೆ ಪುನಾರಂಭವಾಗಿದೆ ರೈತರು ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದಾರೆ.

ಕೇಂದ್ರ ಸರ್ಕಾರ ತಂಬಾಕು ಮೇಲಿನ ಅಬಕಾರಿ ಸುಂಕ ಮತ್ತು ಜಿಎಸ್‌ಟಿ ದರ ಏರಿಕೆ ಮಾಡಲು ಮುಂದಾಗಿರುವುದನ್ನು ವಿರೋಧಿಸಿ ಕಂಪನಿಗಳು ಜ. 23ರಿಂದ ಏಕಾಏಕಿ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದ್ದರು. ಇದರಿಂದ ರಾಮನಾಥಪುರ ಮಾರುಕಟ್ಟೆಯಲ್ಲಿ ಹೊಗೆಸೊಪ್ಪು ಮಾರಾಟ ಮಾಡಲು ಮುಂದಾಗಿದ್ದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು. ಮತ್ತೆ ತಂಬಾಕು ಖರೀದಿಸಲು ವರ್ತಕರು ಮುಂದಾಗಿದ್ದು ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ ನೀಡಿದ ಬೆಲೆಯನ್ನು ಇಲ್ಲಿನ ಮಾರುಕಟ್ಟೆಯಲ್ಲಿ ಮುಂದುವರಿಸಬೇಕು. ಬೆಲೆ ತಾರತಮ್ಯ ಹೋಗಲಾಡಿಸಿ ರೈತರ ನೆರವಿಗೆ ಬರಬೇಕು ಎನ್ನುವುದು ರೈತರ ಒತ್ತಾಯವಾಗಿದೆ.

ಈ ಭಾಗದಲ್ಲಿ ತಂಬಾಕು ಉತ್ಪಾದಿಸಿರುವ ರೈತರು ಗ್ರೇಡಿಂಗ್



ಕಾರ್ಯ ಪೂರ್ಣಗೊಳಿ ಮಾರಾಟಕ್ಕಾಗಿ ಬೇಲ್‌ಗಳನ್ನೂ ಸಿದ್ದಪಡಿಸಿಕೊಂಡಿದ್ದರು. ಮಾರುಕಟ್ಟೆಯಲ್ಲಿ ಇದೇ ಮೊದಲ ಬಾರಿಗೆ ವರ್ತಕರು ಹರಾಜು ಸ್ಥಗಿತಗೊಳಿಸಿದ್ದರಿಂದ ರೈತರು ಆತಂಕಕ್ಕೆ ಒಳಗಾಗಿದ್ದರು. ಬೆಲೆ ಕುಸಿತ ವಿರೋಧಿಸಿ ರೈತರು ಪ್ರತಿಭಟನೆಗೆ ಇಳಿಯುವುದು ಸಾಮಾನ್ಯ, ಆದರೆ ಕಂಪನಿಗಳು ಹರಾಜು ಪ್ರಕ್ರಿಯೆಯಿಂದ ದೂರ ಉಳಿದಿದ್ದರಿಂದ ಉತ್ಪಾದಿತ ತಂಬಾಕು ಇಳುವರಿ ಕುಂಠಿತಗೊಳ್ಳುವ ಜತೆಗೆ ಬೆಳೆಗಾಗಿ ಮಾಡಿರುವ ಸಾಲ ತೀರಿಸಲು ಸಾಧ್ಯವಾಗದೆ ಆತಂಕದ ಸ್ಥಿತಿ ಎದುರಿಸುವಂತಾಗಿತ್ತು. ಬೆಳೆಗಾರರ ಹಿತ ಕಾಯಬೇಕಿದ್ದ ತಂಬಾಕು ಮಂಡಳಿ ಏಕಾಏಕಿ ಹರಾಜು ಸ್ಥಗಿತಗೊಳಿಸಿದ್ದ ಕಂಪನಿಗಳ ಬೆಂಬಲಕ್ಕೆ ನಿಂತಿದ್ದು ಕೂಡ ರೈತರ ಆಕ್ರೋಶಕ್ಕೆ ಕಾರಣವಾಗಿತ್ತು. ಆಂಧ್ರಪ್ರದೇಶಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಉತ್ಕೃಷ್ಟ ದರ್ಜೆಯ ತಂಬಾಕು ಉತ್ಪಾದಿಸುತ್ತಿದ್ದು ವರ್ತಕರು ಇಲ್ಲಿನ ಮಾರುಕಟ್ಟೆಗಳಲ್ಲಿ ಬೆಲೆಯಲ್ಲಿ ತಾರಮತ್ಯ ಮಾಡುತ್ತಿದ್ದರೂ ಮಂಡಳಿ ಮಧ್ಯಪ್ರವೇಶಿಸಿ ರೈತರಿಗೆ ಆಗುತ್ತಿರುವ ಬೆಲೆ ತಾರತಮ್ಯ ನೀತಿ ಸರಿಪಡಿಸುವಲ್ಲಿ ವಿಫಲವಾಗುತ್ತಿದೆ. ಇದೀಗ ಕಂಪನಿಗಳು ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದ್ದರೂ ಮಂಡಳಿ ರೈತರ ಹಿತ ನಿರ್ಲಕ್ಷ್ಯಿಸಿದೆ. ಸಾಲ ಮಾಡಿ ಕಷ್ಟಪಟ್ಟು ತಂಬಾಕು ಉತ್ಪಾದಿಸಿದರೂ ನ್ಯಾಯಯುತ ದರ ಒದಗಿಸದೆ ರೈತರಿಗೆ ಕಿರುಕುಳ ನೀಡಲಾಗುತ್ತಿದೆ. ವರ್ತಕರ ತಾಳಕ್ಕೆ ತಕ್ಕಂತೆ ವರ್ತಿಸದೆ ಮಂಡಳಿ ಬೆಲೆ ತಾರತಮ್ಯ ಸರಿಪಡಿಸಬೇಕು ಎನ್ನುತ್ತಾರೆ ಬೆಳೆಗಾರರು.

## ರೈತರಿಗೆ ಸರಾಸರಿ 210 ರೂ.

ರಾಮನಾಥಪುರ ತಂಬಾಕು ಮಾರುಕಟ್ಟೆಯ ಪ್ಲಾಟ್‌ಫಾರಂ 63ರಲ್ಲಿ ಕಳೆದ 81 ದಿನಗಳಿಂದ ನಡೆದ ಹರಾಜು ಪ್ರಕ್ರಿಯೆಯಲ್ಲಿ 31.88 ಲಕ್ಷ ಕೆಜಿ ಹೊಗೆಸೊಪ್ಪು ಕೊಳ್ಳಲಾಗಿದ್ದು 90.69 ಕೋಟಿ ರೂ. ವಹಿವಾಟು ನಡೆದಿದೆ. ಒಂದು ಕೆಜಿ ಗುಣಮಟ್ಟದ ತಂಬಾಕಿಗೆ 320 ರೂ. ಮತ್ತು ಕನಿಷ್ಠ 210 ರೂ. ಹಾಗೂ ಸರಾಸರಿ 284 ರೂ. ನೀಡಲಾಗಿದೆ. ಫ್ಲಾಟ್ ಫಾರಂ 7ರಲ್ಲಿ 37.49 ಲಕ್ಷ ಕೆಜಿ ತಂಬಾಕು ಖರೀದಿಸಲಾಗಿದ್ದು 10.68 ಕೋಟಿ ರೂ. ವಹಿವಾಟು ನಡೆದಿದೆ. ಗರಿಷ್ಠ 321 ರೂ ಮತ್ತು ಕನಿಷ್ಠ 210 ರೂ. ದರ ನೀಡಿದ್ದು ರೈತರಿಗೆ ಸರಾಸರಿ 285 ರೂ. ದೊರೆತಿದೆ.

> ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಹರಾಜು ಪ್ರಕ್ರಿಯೆ ಪುನಾರಂಭಿಸಲಾಗಿದೆ. ಕರ್ನಾಟದಲ್ಲಿ 40 ಮಿಲಿಯನ್ ಕೆಜಿ ಹೊಗೆಸೊಪ್ಪು ಕೊಳ್ಳಲಾಗಿದ್ದು ಈವರೆಗೆ ಶೇ. 45ರಿಂದ 50ರಷ್ಟು ತಂಬಾಕು ಖರೀದಿಸಲಾಗಿದೆ. ರೈತರು ಎಂದಿನತೆ ಹೊಗೆಸೊಪ್ಪು ಬೆಲ್‌ಗಳನ್ನು ಸಿದ್ದಪಡಿಸಿಕೊಂಡು ಮಾರಾಟಕ್ಕೆ ತರಬೇಕು.
>
> **– ಸವಿತಾ,**
> **ತಂಬಾಕು ಮಾರುಕಟ್ಟೆ ಹರಾಜು ಅಧೀಕ್ಷಕಿ, ರಾಮನಾಥಪುರ**

ಕಳೆದ ಸಾಲಿನ ಹರಾಜು ಪ್ರಕ್ರಿಯೆಯಲ್ಲಿ ಅತಿವೃಷ್ಟಿ ಪರಿಣಾಮ ಮಂಡಳಿ ಎರಡು ಬಾರಿ ತಂಬಾಕು ಬೆಳೆಯಲು ರೈತರಿಗೆ ಕಾಲಾವಕಾಶ ಕಲ್ಪಿಸಿತ್ತು. ಈ ಬಾರಿ ಇಳುವರಿ ಸಾಧರಣ ಎನಿಸಿದರೂ ಬೆಲೆಯಲ್ಲಿ ಏರಿಕೆಯಾಗಿಲ್ಲ. ಕೆಳ ದರ್ಜೆಯ ಬೇಲ್‌ಗಳನ್ನು ಕೊಳ್ಳಲು ಹಿಂದೇಟು ಹಾಕಲಾಗುತ್ತಿದೆ. ಮಾರುಕಟ್ಟೆಗೆ ತಂದ ಹೊಗೆಸೊಪ್ಪು ಬೇಲ್‌ಗಳನ್ನು ಸರಿಯಾಗಿ ಖರೀದಿಸುತ್ತಿಲ್ಲ. ಹರಾಜಿನಲ್ಲಿಯೂ ಗರಿಷ್ಠ ದರದ ಲಾಭ ಧಕ್ಕದೆ ಅನ್ಯಾಯವಾಗಿದೆ ಎಂದು ರೈತರು ಅವಲತ್ತುಕೊಳ್ಳುತ್ತಾರೆ.

## ಕಾಮರಾಜರ ಚಿಂತನೆ

**ಶಾಲೆಯ ಬಾಗಿಲು ತೆರೆದಿರುವ ಪ್ರತಿದಿನವೂ ಜೈಲಿನ ಒಂದು ಬಾಗಿಲು ಮುಚ್ಚುತ್ತದೆ : ಕಾಮರಾಜರ್**

ತಮಿಳುನಾಡಿನ ಜನನಾಯಕ ಕಾಮರಾಜರ್ ಅವರು ಶಿಕ್ಷಣವನ್ನು ಸಮಾಜ ಪರಿವರ್ತನೆಯ ಶಕ್ತಿಯಾಗಿ ಕಂಡಿದ್ದರು. ಈ ಮಾತಿನ ಮೂಲಕ ಅವರು ಶಿಕ್ಷಣವು ಅಪರಾಧ, ಅಜ್ಞಾನ ಮತ್ತು ದಾರಿದ್ರ್ಯವನ್ನು ಕಡಿಮೆ ಮಾಡುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದ್ದಾರೆ. ಮಕ್ಕಳು ಶಾಲೆಗೆ ಹೋದಾಗ ಕೇವಲ ಪುಸ್ತಕ ಜ್ಞಾನವಲ್ಲ, ನೈತಿಕ ಮೌಲ್ಯಗಳು, ಶಿಸ್ತು ಮತ್ತು ಹೊಣೆಗಾರಿಕೆ ಕಲಿಯುತ್ತಾರೆ. ಈ ಗುಣಗಳು ಅವರನ್ನು ಸರಿಯಾದ ದಾರಿಯಲ್ಲಿ ನಡೆಸಿ ತಪ್ಪು ನಿರ್ಧಾರಗಳಿಂದ ದೂರ ಇಡುತ್ತವೆ. ಕಾಮರಾಜರ್ ಅವರ ನಂಬಿಕೆಯಲ್ಲಿ, ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ಸಿಕ್ಕಾಗ ಸಮಾಜದಲ್ಲಿ ಶಾಂತಿ, ಸಮಾನತೆ ಮತ್ತು ಅಭಿವೃದ್ಧಿ ಹೆಚ್ಚುತ್ತದೆ. ಶಿಕ್ಷಣ ಪಡೆದ ನಾಗರಿಕರು ದೇಶದ ಭವಿಷ್ಯವನ್ನು ಸುಧಾರಿಸಿ ಜೈಲುಗಳ ಅಗತ್ಯವನ್ನೇ ಕಡಿಮೆ ಮಾಡುವಂತಹ ಸದ್ಭಾವನೆಯ ಸಮಾಜವನ್ನು ನಿರ್ಮಿಸುತ್ತಾರೆ.

**– ಅಂತೋಣಿ ಮುತ್ತು ವಿ. ಶಿಕ್ಷಕರು, 7259675543**

## ಇತಿಹಾಸದಲ್ಲಿ ಈ ದಿನ

### ಫೆಬ್ರವರಿ-06

**1952:** ಬ್ರಿಟನ್‌ನ ರಾಜ ಜಾರ್ಜ್ ನಿಧನ, ಅವರ ಪುತ್ರಿ ಎಲಿಜಬೆತ್ ರಾಣಿ ಪಟ್ಟಕ್ಕೇರಿದರು.

**1959:** ಭಾರತದ ಪ್ರಸಿದ್ಧ ಗಾಯಕಿ ಆಶಾ ಭೋಸ್ಲೆ ಅವರಿಗೆ ಖ್ಯಾತಿ ತಂದುಕೊಟ್ಟ ಹಲವಾರು ಹಾಡುಗಳು ಬಿಡುಗಡೆಯಾದ ಕಾಲಘಟ್ಟದ ಆರಂಭ.

**2000:** ಫಿನ್‌ಲ್ಯಾಂಡ್‌ನ ತಾರ್ಜಾ ಹಲೋನೇನ್ ದೇಶದ ಮೊದಲ ಮಹಿಳಾ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದರು.

**1895:** ಅಮೆರಿಕದ ಪ್ರಸಿದ್ಧ ಬೇಸ್‌ಬಾಲ್ ಆಟಗಾರ ಬೇಬ್ ರೂತ್

# ಭಾಗ್ಯಲಕ್ಷ್ಮಿ ಯೋಜನೆ: ನೋಂದಣಿ ಪ್ರಮಾಣ ಹೆಚ್ಚಳ

## ಮೆಚ್ಯುರಿಟಿ ಮೊತ್ತ ಪಾವತಿ ಹಿನ್ನೆಲೆ : 3,471 ಫಲಾನುಭವಿಗಳಿಂದ ಅರ್ಜಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಜನನ ಹಾಗೂ ಶಿಕ್ಷಣಕ್ಕೆ ನೆರವಾಗಲೆಂದು 2006-07ರಲ್ಲಿ ಜಾರಿಗೆ ತಂದ ಭಾಗ್ಯಲಕ್ಷ್ಮಿ ಯೋಜನೆಯ ಮೆಚ್ಯುರಿಟಿ ಮೊತ್ತ ಪಾವತಿಯಾಗುತ್ತಿದ್ದು, ಯೋಜನೆಯ ಮಹತ್ವ ಅರಿತ ಸಾರ್ವಜನಿಕರು ನೋಂದಣಿಗೆ ಆಸಕ್ತಿ ತೋರುತ್ತಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜಾರಿಗೊಳಿಸಿದ ಯೋಜನೆ ಇದಾಗಿದೆ. ಅವರ ಅಧಿಕಾರಾವಧಿ ಮುಗಿದ ಬಳಿಕ ಯೋಜನೆಗೂ ಎಳ್ಳುನೀರು ಬಿಡಲಾಗಿದೆ ಎಂಬ ಕಲ್ಪನೆ ಬಹುತೇಕರಲ್ಲಿ ಇತ್ತು. ಆದರೆ, ನಿಯಮದಂತೆ ಮಗುವಿಗೆ 18 ವರ್ಷ ತುಂಬಿದ ಬಳಿಕ ಮೆಚ್ಯುರಿಟಿ ಹಣ ಬ್ಯಾಂಕ್ ಖಾತೆಗೆ ಜಮೆಯಾಗುತ್ತಿದೆ. ಜಿಲ್ಲೆಯಲ್ಲಿ 2006-07 ಹಾಗು 2007-08ನೇ ಸಾಲಿನಲ್ಲಿ ನೋಂದಣಿಯಾಗಿದ್ದ 14,052 ಮಕ್ಕಳ ಪೈಕಿ 9,465 ಜನರಿಗೆ ಹಣ ಪಾವತಿಯಾಗಿದೆ. ಉಳಿದವರಿಗೆ ಹಂತ ಹಂತವಾಗಿ ಜಮೆಯಾಗುತ್ತಿದೆ. 2025-26ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಸುಕನ್ಯ ಸಮೃದ್ಧಿ ಯೋಜನೆಯಡಿ 3,471 ಫಲಾನುಭವಿಗಳು ನೋಂದಣಿಯಾಗಿದ್ದಾರೆ.

### ಏನಿದು ಯೋಜನೆ

ಭಾಗ್ಯಲಕ್ಷ್ಮಿ ಯೋಜನೆಯನ್ನು ಆರ್ಥಿಕ ಪಾಲುದಾರ ಸಂಸ್ಥೆಯಾದ ಭಾರತೀಯ ಜೀವಾ ವಿಮಾ ನಿಗಮದ(ಎಲ್‌ಐಸಿ) ಸಹಯೋಗದೊಂದಿಗೆ 2006-07ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅನುಷ್ಠಾನಗೊಳಿಸಿತ್ತು. 2006 ಮಾ.31ರ ಬಳಿಕ ಬಿಪಿಎಲ್ ಕಾರ್ಡ್‌ದಾರ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳ ಹೆಸರಿನಲ್ಲಿ ಪೋಷಕರಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್‌ಗಳನ್ನು ವಿತರಿಸಲಾಗಿತ್ತು. ಅದು ಈಗ ಪ್ರೌಢಾವಸ್ಥೆ (ಮೆಚ್ಯುರಿಟಿ) ಹಂತ ತಲುಪಿದೆ.

| ಕ್ರ.ಸಂ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಹಾಸನ | 727 |
| 2 | ಚನ್ನರಾಯಪಟ್ಟಣ | 708 |
| 3 | ಹೊಳೆನರಸೀಪುರ | 324 |
| 4 | ಬೇಲೂರು | 302 |
| 5 | ಸಕಲೇಶಪುರ | 269 |
| 6 | ಆಲೂರು | 123 |
| 7 | ಅರಸೀಕೆರೆ | 603 |
| 8 | ಅರಕಲಗೂಡು | 415 |
| | ಒಟ್ಟು | 3471 |

### ಸಿಗಲಿರುವ ಮೊತ್ತ

2006 ಮಾರ್ಚ್ ಅವಧಿಯಲ್ಲಿ ಜನಿಸಿದ ಹೆಣ್ಣು ಮಕ್ಕಳ ಹೆಸರಿನಲ್ಲಿ ಇಡಲಾದ 10,000 ರೂ. ಠೇವಣಿಯು 18 ವರ್ಷಗಳ ಬಳಿಕ ಅಂದಾಜು ಪರಿಪಕ್ವ ಮೊತ್ತ ಒಂದನೇ ಮಗುವಿಗೆ 34,751 ರೂ. ಹಾಗು ಎರಡನೇ ಮಗುವಿಗೆ 40,069 ರೂ. ಆಗಿದೆ. 01-08-2008ರ ನಂತರ ಜನಿಸಿದ ಹೆಣ್ಣು ಮಕ್ಕಳ ಹೆಸರಿನಲ್ಲಿ 19,300 ರೂ. ಠೇವಣಿಯೊಂದಿಗೆ 18 ವರ್ಷದ ಬಳಿಕ ಮೊದಲನೇ ಮಗು 1,00,052 ರೂ. ಹಾಗೂ ಎರಡನೇ ಮಗುವಿಗೆ 1,00.097 ರೂ. ಹಣ ಖಾತೆಗೆ ಜಮಾ ಆಗಲಿದ್ದು 2021-22ನೇ ಸಾಲಿನಿಂದ ಸುಕನ್ಯಾ ಸಮೃದ್ಧಿ ಭಾಗ್ಯಲಕ್ಷ್ಮೀ ಯೋಜನೆ ಮುಂದುವರಿಯುತ್ತದೆ. 2020-21ನೇ ಸಾಲಿನಿಂದ ಆಡಳಿತಾತ್ಮಕ ಕಾರಣಗಳಿಂದ ಭಾಗ್ಯಲಕ್ಷ್ಮಿ ಯೋಜನೆ ಸಂಪೂರ್ಣವಾಗಿ ಮಾರ್ಪಾಡು ಹೊಂದಿದ್ದು, ಅಂಚೆ ಇಲಾಖೆಯ ಸಹಯೋಗದೊಂದಿಗೆ ಎಪಿಎಲ್ ಕಾರ್ಡ್‌ದಾರರ ಕುಟುಂಬಕ್ಕೆ ಸಮೃದ್ಧಿ ಯೋಜನೆ ಹಾಗೂ ಬಿಪಿಎಲ್ ಕುಟುಂಬಕ್ಕೆ ಸುಕನ್ಯಾ ಸಮೃದ್ಧಿ ಭಾಗ್ಯಲಕ್ಷ್ಮಿ ಯೋಜನೆ ಎಂದು ಮರುನಾಮಕರಣಗೊಂಡಿದೆ. ಅದರಡಿ ಕುಟುಂಬದ ಇಬ್ಬರು ಹೆಣ್ಣು ಮಕ್ಕಳ ಹೆಸರಿನಲ್ಲಿ ಪ್ರತಿ ತಿಂಗಳು 3,000 ರೂ.ನಂತೆ 15 ವರ್ಷಗಳವರೆಗೆ ಠೇವಣಿ ಹೂಡಲಾಗುತ್ತದೆ. 21 ವರ್ಷ ಪೂರ್ಣಗೊಂಡ ಬಳಿಕ ಅಂದಾಜು ಪರಿಪಕ್ವ ಮೊತ್ತ 1,27,000 ರೂ. ಫಲಾನುಭವಿಯ ಖಾತೆಗೆ ಜಮಾವಣೆಯಾಗುತ್ತದೆ.

### ಮೆಚ್ಯುರಿಟಿ ಪಡೆದವರ ವಿವರ

2006-07ರಲ್ಲಿ ಅರ್ಜಿ ಸಲ್ಲಿಸಿದ್ದ ಹಾಸನ ತಾಲ್ಲೂಕಿನ 1030, ಚನ್ನರಾಯಪಟ್ಟಣ 999, ಹೊಳೆನರಸೀಪುರ 733, ಬೇಲೂರು 738, ಸಕಲೇಶಪುರ 415, ಆಲೂರು 321, ಅರಸೀಕೆರೆ 1494, ಅರಕಲಗೂಡು 817 ಹೆಣ್ಣು ಮಕ್ಕಳಿಗೆ ಮೆಚ್ಯುರಿಟಿ ಹಣ ಪಾವತಿಯಾಗಿದೆ.

2007-08ರಲ್ಲಿ ಹಾಸನ ತಾಲ್ಲೂಕಿನ 510, ಚನ್ನರಾಯಪಟ್ಟಣ 381, ಹೊಳೆನರಸೀಪುರ 188, ಬೇಲೂರು 391, ಸಕಲೇಶಪುರ 238, ಆಲೂರು 151, ಅರಸೀಕೆರೆ 655 ಹಾಗು ಅರಕಲಗೂಡು ತಾಲ್ಲೂಕಿನ 404 ಮಕ್ಕಳು ಯೋಜನೆಯ ಪ್ರಯೋಜನ ಪಡೆದಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248